ದಿಃ 08-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. **MAJ.** ವಕೀಲರಿಂದ:

ದಾವಾ ಆಸ್ತಿ ಸ.ನಂ. 402 ಇರಬಹುದು. ದಾವಾ ಆಸ್ತಿ ಚೆಕ್ಕುಬಂದಿಯನ್ನು ನನ್ನ ನಿಶಾನೆ-20 ರಲ್ಲಿ ಬರೆದಿರುತ್ತಾರೆ. ನಿಪಿ-20 ರಲ್ಲಿ ದಾವಾ ಆಸ್ತಿ ಚೆಕ್ಕುಬಂದಿ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-20 ನ್ನು 2002 ರಲ್ಲಿ ಬರೆದಿರುತ್ತಾರೆ ಆದರೆ ನಿಖರವಾದ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ನಿಪಿ-20 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಆದರೆ ನನ್ನ ಗಂಡನ ಸಹಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-20 ರ ವಿಷಯ ನನಗೆ ಗೊತ್ತಿರುತ್ತದೆ. ನಿಪಿ-20 ನ್ನು ತಹಶೀಲ್ದಾರ ಕಚೇರಿಯಲ್ಲಿ ಬರೆಯಲಾಗಿದೆ. ಪೂರ್ತಿ ಹಣವನ್ನು ಅವತ್ತೆ ನೀಡಲಾಗಿದೆ. ದಾವಾ ಆಸ್ತಿ ನನ್ನ ಗಂಡ ಖರೀದಿ ಮಾಡಿರುತ್ತಾನೆ. ಬಾಳಪ ರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ವಿಚಾರಣೆ ಮಾಡಿಲ್ಲ. ಬಾಳಪ್ಪ ರವರಿಗೆ ಎಷ್ಟು ಸಾಲ ಇತ್ತು ಯಾರಿಂದ ಪಡೆದರು ಎಂದು ವಿಚಾರಣೆ ಮಾಡಿಲ್ಲ. ಪ್ರತಿವಾದಿಯರಿಗೆ ನನ್ನ ಗಂಡ ದಾವಾ ಹೂಡುವ ಪೂರ್ವದಲ್ಲಿ ನೋಟಿಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡಿರುತ್ತಾರೆ. ಈ ದಾವೆ ನನ್ನ ಗಂಡ ಯಾವಾಗ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವೆ ಹೂಡುವ ಸಮಯದಲ್ಲಿ ನಿಪಿ 20 ನ್ನು ಹಾಜರುಪಡಿಸಿರಲಿಲ್ಲ ಎಂದರೆ ಸಾಕ್ಷಿ ಬೇರೊಬ್ಬರ ಬಳಿ ಇತ್ತು ಎಂದು ನುಡಿಯುತ್ತಾರೆ. ನಿಪಿ 20 ಬೇರೆಯವರ ಬಳಿ ಇತ್ತು ಎಂದು ವಾದಪತ್ರದಲ್ಲಿ ಬರೆದಿದ್ದಾರೋ ಇಲ್ಲ ಎಂದು ಗೊತ್ತಿಲ್ಲ ನಿಪಿ 20 ಕೊಟ್ಟಿ ದಾಖಲಾತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ನಮ್ಮ ಅಣ್ಣನ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ